**National**
**Kannada**
**16.08.2026 19.35 hrs**
ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

<u>ಮುಖ್ಯಾಂಶಗಳು</u>

೧. ಜ್ಞಾನ, ಕೌಶಲ್ಯ ಮತ್ತು ನಾವೀನ್ಯತೆಯನ್ನು ರಾಷ್ಟ್ರ ನಿರ್ಮಾಣಕ್ಕೆ ಬಳಸಿಕೊಳ್ಳಿ: ಪದವೀಧರರಿಗೆ ಉಪರಾಷ್ಟ್ರಪತಿ ಕರೆ

೨. ವಿಕಸಿತ ಭಾರತ ನಿರ್ಮಾಣಕ್ಕೆ ಯುವಜನರು, ಬಡವರು, ಮಹಿಳೆಯರು ಮತ್ತು ರೈತರ ಸಬಲೀಕರಣ ಅಗತ್ಯ: ಸಚಿವ ಅಮಿತ್ ಶಾ

೩. ನೇಪಾಳಕ್ಕೆ ಸೇನಾ ಮುಖ್ಯಸ್ಥ ಜನರಲ್ ಧೀರಜ್ ಸೇಠ್ ಮೂರು ದಿನಗಳ ಭೇಟಿ; ರಕ್ಷಣಾ ಸಹಕಾರ ಮತ್ತು ಮಿಲಿಟರಿ ಬಾಂಧವ್ಯಕ್ಕೆ ಒತ್ತು

೪. ಟೆಸ್ಟ್ ಕ್ರಿಕೆಟ್: ಶ್ರೀಲಂಕಾ ವಿರುದ್ಧ ಎರಡನೇ ದಿನದಾಟದ ಅಂತ್ಯಕ್ಕೆ ೬ ವಿಕೆಟ್‌ಗೆ ೪೬೦ ರನ್ ಗಳಿಸಿದ ಭಾರತ

---

'ರಾಷ್ಟ್ರ ಮೊದಲು' ಎಂಬ ತತ್ವದ ಮಾರ್ಗದರ್ಶನದಲ್ಲಿ ಪದವಿ ಪಡೆದ ವಿದ್ಯಾರ್ಥಿಗಳು ತಮ್ಮ ಜ್ಞಾನ, ಕೌಶಲ್ಯ ಮತ್ತು ನಾವೀನ್ಯತೆಯನ್ನು ರಾಷ್ಟ್ರ ನಿರ್ಮಾಣಕ್ಕಾಗಿ ಬಳಸಿಕೊಳ್ಳಬೇಕೆಂದು ಉಪರಾಷ್ಟ್ರಪತಿ ಸಿ.ಪಿ. ರಾಧಾಕೃಷ್ಣನ್ ಕರೆ ನೀಡಿದ್ದಾರೆ.

ಚೆನ್ನೈ ಬಳಿಯ ಕಟ್ಟಂಕುಲತೂರ್‌ನಲ್ಲಿರುವ ಎಸ್‌ಆರ್‌ಎಂ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಯ ೨೨ ನೇ ಘಟಿಕೋತ್ಸವವನ್ನುದ್ದೇಶಿಸಿ ಮಾತನಾಡಿದ ಅವರು, ೨೦೪೭ ರ ವೇಳೆಗೆ ದೇಶದ ವಿಕಸಿತ ಭಾರತ ಪ್ರಯಾಣದಲ್ಲಿ, ಭಾರತದ ಯುವಜನರು ಪ್ರಮುಖ ಪಾತ್ರ ವಹಿಸುತ್ತಾರೆ ಎಂದು ಹೇಳಿದರು.

೨೦೧೪ ರಿಂದ ಉನ್ನತ ಶಿಕ್ಷಣದಲ್ಲಿ ದೇಶದ ವಿಸ್ತರಣೆಯನ್ನು ಅವರು ಎತ್ತಿ ತೋರಿಸಿದರು. ಉನ್ನತ ಶಿಕ್ಷಣದಲ್ಲಿ ಮಹಿಳೆಯರ ಹೆಚ್ಚುತ್ತಿರುವ ಭಾಗವಹಿಸುವಿಕೆಯನ್ನು ಗಮನಿಸಿದ ಅವರು, ಕೃತಕ ಬುದ್ಧಿಮತ್ತೆ, ಕ್ವಾಂಟಮ್ ತಂತ್ರಜ್ಞಾನ, ಅರೆವಾಹಕಗಳು, ರೊಬೊಟಿಕ್ಸ್ ಮತ್ತು ಜೈವಿಕ ತಂತ್ರಜ್ಞಾನದಂತಹ ಉದಯೋನ್ಮುಖ ಕ್ಷೇತ್ರಗಳ ಮಹತ್ವದ ಕುರಿತು ವಿವರಿಸಿದರು.

---

೨೦೪೭ರ ವೇಳೆಗೆ ಭಾರತವನ್ನು ಸಂಪೂರ್ಣ ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿಸುವ ಗುರಿ ಸಾಧಿಸಲು ಯುವಜನರು, ಬಡವರು, ಮಹಿಳೆಯರು ಮತ್ತು ರೈತರ ಸಬಲೀಕರಣ ಅತ್ಯಗತ್ಯ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ.

ರಾಜಸ್ಥಾನದ ಅಲ್ವಾರ್‌ನಲ್ಲಿ ಇಂದು ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರಾಜ್ಯದ ೧೭ ಜಿಲ್ಲೆಗಳಲ್ಲಿ ೬ ಸಾವಿರದ ೪೫೩ ಅಭಿವೃದ್ಧಿ ಯೋಜನೆಗಳಿಗೆ ಶಂಕುಸ್ಥಾಪನೆ ಹಾಗೂ ಉದ್ಘಾಟನೆ ನೆರವೇರಿಸಿದ ಬಳಿಕ ಕಾರ್ಯಕ್ರಮವನ್ನುದೇಶಿಸಿ ಮಾತನಾಡಿದರು. ರೈತರ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಹಲವು ಮಹತ್ವದ ಯೋಜನೆಗಳನ್ನು ಜಾರಿಗೊಳಿಸಿದ್ದು, ೨೦೧೪ರಿಂದ ೨೦೨೬ರವರೆಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿರಂತರವಾಗಿ ಹೆಚ್ಚಿಸಲಾಗಿದೆ ಎಂದು ತಿಳಿಸಿದರು.

ಗ್ರಾಮೀಣ ಆರ್ಥಿಕತೆಯನ್ನು ಪರಿವರ್ತಿಸುವಲ್ಲಿ ಹೈನುಗಾರಿಕೆ ಕ್ಷೇತ್ರಕ್ಕೆ ಅಪಾರ ಸಾಮರ್ಥ್ಯವಿದೆ ಎಂದು ಅಮಿತ್ ಶಾ ಹೇಳಿದರು. ರಾಜಸ್ಥಾನದಾದ್ಯಂತ ಹೆಚ್ಚಿನ ಹಾಲು ನೀಡುವ ಸಾಮರ್ಥ್ಯ ಹೊಂದಿರುವ ಹಸು ಮತ್ತು ಎಮ್ಮೆ ತಳಿಗಳು ಪ್ರತಿ ಕುಟುಂಬಕ್ಕೂ ತಲುಪುವಂತೆ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ತಿಳಿಸಿದರು.

---

ಭಾರತೀಯ ಸೇನಾ ಮುಖ್ಯಸ್ಥ ಜನರಲ್ ಧೀರಜ್ ಸೇಠ್ ಇಂದು ನೇಪಾಳಕ್ಕೆ ಅಧಿಕೃತ ಭೇಟಿ ನೀಡಿದ್ದಾರೆ.

ಮೂರು ದಿನಗಳ ಈ ಭೇಟಿಯು ಭಾರತ ಮತ್ತು ನೇಪಾಳ ನಡುವಿನ ನಿಕಟ ರಕ್ಷಣಾ ಸಹಕಾರ ಮತ್ತು ಮಿಲಿಟರಿ ಸಂಬಂಧಗಳನ್ನು ಮತ್ತಷ್ಟು ಬಲಪಡಿಸುವ ಗುರಿಯನ್ನು ಹೊಂದಿದೆ.

ತುಂಡಿಖೇಲ್‌ನ ಸೇನಾ ಮಂಟಪಕ್ಕೆ ನಾಳೆ ಭೇಟಿ ನೀಡಲಿರುವ ಜನರಲ್ ಸೇಠ್, ನೇಪಾಳಿ ಸೇನಾ ಪ್ರಧಾನ ಕಚೇರಿಯಲ್ಲಿ ಗೌರವ ವಂದನೆ ಸ್ವೀಕರಿಸಲಿದ್ದಾರೆ. ನಂತರದಲ್ಲಿ ಅವರು ನೇಪಾಳಿ ಸೇನಾ ಮುಖ್ಯಸ್ಥರೊಂದಿಗೆ ಸಂವಾದ ನಡೆಸಲಿದ್ದು, ನೇಪಾಳಿ ಸೇನೆಯ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರಿಂದ ಪರಸ್ಪರ ಹಿತಾಸಕ್ತಿಯ ವಿಷಯಗಳ ಕುರಿತು ಚರ್ಚಿಸಲಿದ್ದಾರೆ.

ನಂತರ, ಜನರಲ್ ಸೇಠ್ ರಾಷ್ಟ್ರಪತಿ ಭವನದಲ್ಲಿ ನಡೆಯುವ ಹೂಡಿಕೆ ಸಮಾರಂಭದಲ್ಲಿ ಭಾಗವಹಿಸಲಿದ್ದಾರೆ. ಅಲ್ಲಿ, ಭಾರತೀಯ ಮತ್ತು ನೇಪಾಳಿ ಸೇನೆಗಳ ನಡುವಿನ ವಿಶಿಷ್ಟ ಸಂಪ್ರದಾಯಕ್ಕೆ ಅನುಗುಣವಾಗಿ, ನೇಪಾಳಿ ಅಧ್ಯಕ್ಷ ರಾಮ್ ಚಂದ್ರ ಪೌಡೆಲ್, ಇವರಿಗೆ ನೇಪಾಳಿ ಸೇನೆಯ ಗೌರವ ಜನರಲ್ ಹುದ್ದೆಯನ್ನು ಪ್ರದಾನ ಮಾಡಲಿದ್ದಾರೆ.

---

'ಹರ್ ಘರ್ ತಿರಂಗ' ಅಭಿಯಾನದ ಭಾಗವಾಗಿ ಇಂದು ಹರಿಯಾಣದ ಕರ್ನಾಲ್‌ನಲ್ಲಿ 'ತಿರಂಗ ಯಾತ್ರೆ' ನಡೆಯಿತು. ಕೇಂದ್ರ ವಿದ್ಯುತ್ ಸಚಿವ ಮನೋಹರ್ ಲಾಲ್ ತಿರಂಗ ಯಾತ್ರೆಗೆ ಚಾಲನೆ ನೀಡಿದರು.

ಈ ತಿಂಗಳ ೯ ರಿಂದ ೧೭ ರವರೆಗೆ ದೇಶಾದ್ಯಂತ 'ಹರ್ ಘರ್ ತಿರಂಗ' ಅಭಿಯಾನ ನಡೆಸಲಾಗುತ್ತಿದೆ.

ತ್ರಿವರ್ಣ ಧ್ವಜವನ್ನು ಹಿಡಿದುಕೊಂಡು ಹೆಚ್ಚಿನ ಸಂಖ್ಯೆಯ ಜನರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ಕೇಂದ್ರ ಸಚಿವರು ಸ್ವತಃ ಮೋಟಾರ್ ಸೈಕಲ್‌ನಲ್ಲಿ ಮೆರವಣಿಗೆಯಲ್ಲಿ ಸೇರಿಕೊಂಡರು, ಭಾಗವಹಿಸುವವರ ಉತ್ಸಾಹವನ್ನು ಹೆಚ್ಚಿಸಿದರು. ಪ್ರತಿಯೊಬ್ಬ ನಾಗರಿಕರಿಗೂ ದೇಶಭಕ್ತಿ ಮತ್ತು ರಾಷ್ಟ್ರೀಯ ಹೆಮ್ಮೆಯ ಸಂದೇಶವನ್ನು ತಿಳಿಸುವುದು ಯಾತ್ರೆಯ ಉದ್ದೇಶವಾಗಿತ್ತು.

---

ರಾಷ್ಟ್ರೀಯ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಂಸ್ಥೆಯು 'ಸೈಬರ್ ಕುಶ್ತಿ ೨೦೨೫' ಎಂಬ ರಾಷ್ಟ್ರೀಯ ಸೈಬರ್ ಭದ್ರತೆ ಮತ್ತು ಕೃತಕ ಬುದ್ಧಿಮತ್ತೆ ಹ್ಯಾಕಥಾನ್ ಅನ್ನು ಪ್ರಾರಂಭಿಸಿದೆ.

ಸೈಬರ್ ಭದ್ರತಾ ಮೌಲ್ಯಮಾಪನದಲ್ಲಿ, ಮಾನವನ ತೀರ್ಪನ್ನು ಪರೀಕ್ಷಿಸಲು ಮತ್ತು ಗುರುತಿಸಲು ಈ ಹ್ಯಾಕಥಾನ್ ಅನ್ನು ವಿನ್ಯಾಸಗೊಳಿಸಲಾಗಿದೆ ಎಂದು ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವಾಲಯ ತಿಳಿಸಿದೆ.

ಸೈಬರ್ ಕುಶ್ತಿ ೨೦೨೫ ಕ್ಕಾಗಿ ನೋಂದಣಿ ನಿನ್ನೆ ಆರಂಭವಾಗಿದ್ದು, ಮುಂದಿನ ತಿಂಗಳು ೧೦ ರವರೆಗೆ ತೆರೆದಿರುತ್ತದೆ. ಭಾಗವಹಿಸುವಿಕೆ ಉಚಿತವಾಗಿದ್ದು, ತಂಡದಲ್ಲಿ ಮೂವರಂತೆ, ವಿದ್ಯಾರ್ಥಿಗಳು ಮತ್ತು ಸ್ವತಂತ್ರ ಸಂಶೋಧಕರಿಗೆ ಇದು ಮುಕ್ತವಾಗಿದೆ ಎಂದು ಸಚಿವಾಲಯ ತಿಳಿಸಿದೆ.

ವಿಜೇತ ತಂಡಕ್ಕೆ ಸಾಂಪ್ರದಾಯಿಕ ಗಧೆಯೊಂದಿಗೆ 'ಸೈಬರ್ ಕೇಸರಿ ೨೦೨೫' ಪ್ರಶಸ್ತಿಯನ್ನು ನೀಡಲಾಗುವುದು. ರನ್ನರ್ಸ್ ಅಪ್‌ಗೆ 'ರುಸ್ತಮ್' ಮತ್ತು 'ಪಹಲ್ವಾನ್' ಪ್ರಶಸ್ತಿಗಳನ್ನು ಕೊಡಲಾಗುವುದು ಎಂದು ಸಚಿವಾಲಯ ತಿಳಿಸಿದೆ.

---

ಜಮ್ಮು ಮತ್ತು ಕಾಶ್ಮೀರದಲ್ಲಿ, ಜಮ್ಮು-ಪೂಂಚ್ ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಬಹುನಿರೀಕ್ಷಿತ ಸುಂಗಲ್ ಸುರಂಗವನ್ನು ಸಾರ್ವಜನಿಕ ಸಂಚಾರಕ್ಕೆ ಮುಕ್ತಗೊಳಿಸಲಾಗಿದ್ದು, ಈ ಮೂಲಕ ರಾಜೌರಿ, ಪೂಂಚ್ ಮತ್ತು ನೌಶೇರಾಗಳೊಂದಿಗೆ ಸಂಪರ್ಕಕ್ಕೆ ಪ್ರಮುಖ ಉತ್ತೇಜನವನ್ನು ಒದಗಿಸಲಾಗಿದೆ.

ಕಾಲಿಧರ್ ಶ್ರೇಣಿಯ ಮೂಲಕ ಗಡಿ ರಸ್ತೆಗಳ ಸಂಸ್ಥೆ ನಿರ್ಮಿಸಿದ ೨.೭೯ ಕಿಲೋಮೀಟರ್ ಉದ್ದದ ಈ ಸುರಂಗವು ಅಸ್ತಿತ್ವದಲ್ಲಿರುವ ಮಾರ್ಗದ ಕಠಿಣ ಪ್ರದೇಶವನ್ನು ಬೈಪಾಸ್ ಮಾಡುತ್ತದೆ. ಪ್ರಯಾಣದ ದೂರವನ್ನು ಸುಮಾರು ೧೨ ಕಿಲೋಮೀಟರ್‌ಗಳಷ್ಟು ಕಡಿಮೆ ಮಾಡಿ, ಗಣನೀಯ ಪ್ರಯಾಣ ಸಮಯವನ್ನು ಉಳಿಸುತ್ತದೆ.

ಸುಮಾರು ೭೦೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾದ ಈ ಸುರಂಗವು ಪ್ರಸ್ತುತ ಬೆಳಿಗ್ಗೆ ೮ ರಿಂದ ರಾತ್ರಿ ೮ ರವರೆಗೆ ಲಘು ವಾಹನಗಳಿಗೆ ಮಾತ್ರ ತೆರೆದಿರುತ್ತದೆ.

---

ಉಕ್ರೇನ್ ಮತ್ತು ರಷ್ಯಾ ಇಂದು ಪರಸ್ಪರ ಕ್ಷಿಪಣಿ ಮತ್ತು ಡ್ರೋನ್ ದಾಳಿ ನಡೆಸಿವೆ. ಈ ದಾಳಿಗಳು ಎರಡೂ ಕಡೆಗಳಲ್ಲಿ ಕನಿಷ್ಠ ೧೧ ಜನರನ್ನು ಬಲಿ ಪಡೆದಿವೆ.

ರಷ್ಯಾದಾದ್ಯಂತ ಉಕ್ರೇನ್, ನೂರಾರು ಡ್ರೋನ್‌ಗಳನ್ನು ಹಾರಿಸಿದ್ದು, ಆರು ಜನರು ಬಲಿಯಾಗಿದ್ದಾರೆ. ಡ್ರೋನ್ ದಾಳಿಗಳು ಮೂರು ಪಟ್ಟಣಗಳನ್ನು ಗುರಿಯಾಗಿಸಿಕೊಂಡಿದವು. ೧೫೦ ಕ್ಕೂ ಹೆಚ್ಚು ಡ್ರೋನ್‌ಗಳನ್ನು ಒಳಗೊಂಡ ಈ ದಾಳಿಗಳು ಹಲವಾರು ಮನೆಗಳು ಮತ್ತು ರೈಲ್ವೆ ನಿಲ್ದಾಣವನ್ನು ಹಾನಿಗೊಳಿಸಿದವು. ರಷ್ಯಾದ ರಕ್ಷಣಾ ಸಚಿವಾಲಯವು ರಾತ್ರಿಯಿಡೀ ೮೨೨ ಉಕ್ರೇನಿಯನ್ ಡ್ರೋನ್‌ಗಳನ್ನು ನಾಶಪಡಿಸಿದೆ ಎಂದು ಹೇಳಿದೆ.

ಏತನ್ಮಧ್ಯೆ, ಉಕ್ರೇನ್‌ನಲ್ಲಿ ರಷ್ಯಾದ ದಾಳಿಗಳು ಐದು ಜನರನ್ನು ಬಲಿ ಪಡೆದಿವೆ. ರಷ್ಯಾ ದಾಳಿಗಳು ಕ್ರಿವಿ ರಿಹ್‌ನಲ್ಲಿರುವ ಲೋಹಶಾಸ್ತ್ರೀಯ ಸ್ಥಾವರ ಮತ್ತು ಕೈವ್‌ನಲ್ಲಿರುವ ಹಲವಾರು ಮಿಲಿಟರಿ-ಕೈಗಾರಿಕಾ ಸೌಲಭ್ಯಗಳನ್ನು ಗುರಿಯಾಗಿಸಿಕೊಂಡಿದ್ದವು ಎಂದು ರಷ್ಯಾದ ರಕ್ಷಣಾ ಸಚಿವಾಲಯ ತಿಳಿಸಿದೆ.

---

ದಕ್ಷಿಣ ಏಷ್ಯಾ ಮುಕ್ತ ವ್ಯಾಪಾರ ಒಪ್ಪಂದ- ಸಾಫ್ಟಾ ದ ದುರ್ಬಳಕೆ ಮಾಡಿಕೊಂಡು ದಕ್ಷಿಣ-ಪೂರ್ವ ಏಷ್ಯಾದ ಅಡಿಕೆಯನ್ನು ಬಾಂಗ್ಲಾದೇಶ ಮೂಲದ್ದು ಎಂದು ಸುಳ್ಳು ಘೋಷಣೆ ಮಾಡಿ ಭಾರತಕ್ಕೆ ಅಕ್ರಮವಾಗಿ ಆಮದು ಮಾಡಿಕೊಳ್ಳುತ್ತಿದ್ದ ಬೃಹತ್ ಜಾಲವನ್ನು ಕಂದಾಯ ಗುಪ್ತಚರ ನಿರ್ದೇಶನಾಲಯ- ಡಿಆರ್‌ಐ ಭೇದಿಸಿದೆ.

ಈ ಕುರಿತು ಕೇಂದ್ರ ಹಣಕಾಸು ಸಚಿವಾಲಯ ಮಾಹಿತಿ ನೀಡಿದ್ದು, ಈವರೆಗೆ ನಡೆದಿರುವ ತನಿಖೆಯಲ್ಲಿ ೨ ಸಾವಿರದ ೫೦೦ ಕೋಟಿ ರೂಪಾಯಿಗೂ ಅಧಿಕ ಕಂದಾಯ ನಷ್ಟವಾಗಿರುವುದು ಕಂಡುಬಂದಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇದುವರೆಗೆ ೯ ಜನರನ್ನು ಬಂಧಿಸಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

---

ಶ್ರೀಲಂಕಾದ ಗಾಲೆ ಅಂತಾರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಭಾರತ-ಶ್ರೀಲಂಕಾ ನಡುವಿನ ಮೊದಲ ಟೆಸ್ಟ್ ಪಂದ್ಯದ ಎರಡನೇ ದಿನದಾಟದ ಅಂತ್ಯಕ್ಕೆ ಇಂದು ಭಾರತ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೯ ವಿಕೆಟ್‌ಗಳಿಗೆ ४೬೦ ರನ್ ಗಳಿಸಿದೆ.

ಇಂದಿನ ದಿನದಾಟದ ಅಂತ್ಯಕ್ಕೆ ಭಾರತದ ಪರವಾಗಿ ದೇವದತ್ ಪಡಿಕ್ಕಲ್ ೧೬೭ ರನ್ ಗಳಿಸಿದರೆ, ಧ್ರುವ್ ಜುರೇಲ್ ೫೧ ರನ್ ಗಳಿಸಿ ತಮ್ಮ ವಿಕೆಟ್ ಒಪ್ಪಿಸಿದರು. ಕುಲ್‌ದೀಪ್ ಯಾದವ್ ಮತ್ತು ಪ್ರಸಿದ್ಧ ಕೃಷ್ಣ ಪ್ರಸ್ತುತ ಕಣದಲ್ಲಿದ್ದಾರೆ.

ಶ್ರೀಲಂಕಾ ಪರವಾಗಿ ಪ್ರಬತ್ ಜಯಸೂರಿಯ ४ ವಿಕೆಟ್ ಪಡೆದರೆ, ಕೆಶಾರ ನುವಾಂಥ ೩ ವಿಕೆಟ್ ಗಳಿಸಿ ಮಿಂಚಿದರು.

---

ನವದೆಹಲಿಯ ಇಂದಿರಾ ಗಾಂಧಿ ಕ್ರೀಡಾಂಗಣದಲ್ಲಿ ನಾಳೆಯಿಂದ ಇದೇ ೨೩ ರವರೆಗೆ 'ಬಿಡಬ್ಲ್ಯೂ ಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್' ನಡೆಯಲಿದೆ.

೨೦೦೯ ರ ನಂತರ ಭಾರತವು ಈ ಕೂಟಕ್ಕೆ ಆತಿಥ್ಯ ವಹಿಸುತ್ತಿರುವುದು ಇದು ಎರಡನೇ ಬಾರಿಯಾಗಿದೆ. ೨೦೧೧ ರಿಂದ ಭಾರತವು ಪ್ರತಿ ಆವೃತ್ತಿಯಲ್ಲೂ ಕನಿಷ್ಠ ಒಂದು ಪದಕ ಗೆಲ್ಲುತ್ತಾ ಬಂದಿದ್ದು, ಈವರೆಗೆ ಒಟ್ಟು ೧४ ಪದಕಗಳನ್ನು ಪಡೆದುಕೊಂಡಿದೆ.

ಈ ಬಾರಿಯ ಪಂದ್ಯಾವಳಿಯಲ್ಲಿ ಪಿ.ವಿ.ಸಿಂಧು, ಲಕ್ಷ್ಯ ಸೇನ್ ಹಾಗೂ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್-ಚಿರಾಗ್ ಶೆಟ್ಟಿ ಜೋಡಿ ಭಾರತದ ಪ್ರಮುಖ ಪದಕದ ಭರವಸೆಯಾಗಿದ್ದಾರೆ.

ಮಹಿಳೆಯರ ಡಬಲ್ಸ್‌ನಲ್ಲಿ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಹಾಗೂ ಮಿಶ್ರ ಡಬಲ್ಸ್‌ನಲ್ಲಿ ಧ್ರುವ್ ಕಪಿಲಾ ಮತ್ತು ತನಿಷಾ ಕ್ರಾಸ್ಟೊ ಸ್ಪರ್ಧಿಸಲಿದ್ದಾರೆ.

________________

ಭಾರತಕ್ಕೆ ಪುದುಚೇರಿ ಕೇಂದ್ರಾಡಳಿತ ಪ್ರದೇಶವನ್ನು ಏಕೀಕರಿಸಿದ ನೆನಪಿಗಾಗಿ, ಇಂದು ಪುದುಚೇರಿ ಡಿ ಜ್ಯೂರ್ ವರ್ಗಾವಣೆ ದಿನವನ್ನು ಆಚರಿಸಿತು.

೧೯೫೪ ರಲ್ಲಿ ಭಾರತದೊಂದಿಗಿನ ವಿಲೀನದ ಐತಿಹಾಸಿಕ ಜನಾಭಿಪ್ರಾಯ ಸಂಗ್ರಹಣೆ ನಡೆದ ಕೀಜುರ್ ಪ್ರದೇಶದಲ್ಲಿ ಪುದುಚೇರಿ ಗೃಹ ಸಚಿವ ಎ. ನಮಸ್ಸಿವಾಯಂ ರಾಷ್ಟ್ರಧ್ವಜಾರೋಹಣ ನೆರವೇರಿಸಿದರು.

________________

ಎಫ್‌ಐಎಚ್ ಮಹಿಳಾ ಹಾಕಿ ವಿಶ್ವಕಪ್‌ನಲ್ಲಿ ಭಾರತೀಯ ಮಹಿಳಾ ತಂಡ ಚೀನಾ ವಿರುದ್ಧದ ಪಂದ್ಯದೊಂದಿಗೆ ತನ್ನ ಅಭಿಯಾನ ಆರಂಭಿಸಿದೆ.

ನೆದರ್‌ಲ್ಯಾಂಡ್ಸ್‌ನ ಆಮ್‌ಸ್ಟೆಲ್ವೀನ್‌ನ ವ್ಯಾಗ್ನರ್ ಕ್ರೀಡಾಂಗಣದಲ್ಲಿ ಪೂಲ್ ಡಿ ವಿಭಾಗದ ಈ ಪಂದ್ಯವು ೧-೧ ಗೋಲುಗಳ ಸಮಬಲದ ಹೋರಾಟದೊಂದಿಗೆ ಅಂತ್ಯಗೊಂಡಿದೆ.

ಭಾರತದ ಪರವಾಗಿ ನವನೀತ್ ಕೌರ್ ಹಾಗೂ ದೀಪಿಕಾ ತಲಾ ಒಂದು ಗೋಲು ಗಳಿಸಿದರು.

__________ ಮುಕ್ತಾಯ _________